ಮೈಸೂರ ಗೆಜಿಟ್.

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ ಆಗಸ್ಟ್ ತಾ|| 23, ಸ್ಯ 1890.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗ್ಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ನೋಟೀಸು.

ಮೈಸೂರು ಚೀಫ್ ಕೋರ್ಟ್‌ನಲ್ಲಿ.

ಕ್ರಿಮಿನಲ್ ತರಫ್.

ರೂಲ್ ಆಫ್ ಪ್ರಾಕ್ಟೀಸ್ ಎಂಬ ಆಚರಣ ನಿಬಂಧನೆ ನಂಬರು 52.

ತಾರೀಖು 12ನೇ ಮಾರ್ಚಿ 1890ನೇ ಈಸವಿ.

ನಂ. 30;–5ನೇ ಜೂಲೈ 1883.
„ 38; 6ನೇ ಜಾನ್ಯುಅರಿ 1885.
„ 44; 27ನೇ ಅಕ್ಟೋಬರ್ 1886.
„ 48; 15ನೇ ಆಗಸ್ಟ್ 1887.

ಕ್ಯಾಲಂಡರುಗಳನ್ನು ಮೇಲಕ್ಕೆ ರವಾನಿಸತಕ್ಕ ವಿಷಯವನ್ನು ಕುರಿತು, ಈ ಪಕ್ಕದಲ್ಲಿ ನಮೂದಿಸುವ ಆಚರಣ ನಿಬಂಧನೆಗಳನ್ನು ರದ್ದು ಮಾಡಿ, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡು 553ನೇ ಪ್ರಕರಣದ ಪ್ರಕಾರ, ಗವರ್ನಮೆಂಟಿನವರ ಮಂಜೂರಾತಿಯಿಂದ, ಚೀಫ್ ಕೋರ್ಟ್‌ನವರು ಮಾಡಿರುವ ನಿಬಂಧನೆಗಳು ಹ್ಯಾಗೆಂದರೆ:—

ಒರಿಜಿನಲ್ ಅಧಿಕಾರ.

1. ಸೆಷ್ಷ ಕೋರ್ಟ್‌ನವರು ವಿಚಾರಣೆಯ ಕ್ಯಾಲಂಡರುಗಳನ್ನು, ಇದಕ್ಕೆ ಸೇರಿಸಿರತಕ್ಕ ನಮೂನೆಯ ರೀತ್ಯಾ ತಯಾರ್ಮಾಡಿ, ಸೆಷ್ಷ ಮುಗಿದ 48 ಘಂಟೆಯೊಳಗಾಗಿ ಚೀಫ್ ಕೋರ್ಟ್‌ಗೆ ಕಳುಹಿಸತಕ್ಕದ್ದು.

2. ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 34ನೇ ಪ್ರಕರಣದ 2ನೇ ಕಲಂ ಪ್ರಕಾರ ಸಜಾ ಸ್ಥಿರಪಡಿಸತಕ್ಕದ್ದಕ್ಕಾಗಿ ಸೆಷ್ಷ ಜಡ್ಜ್‌ರುಗಳಿಗೆ ಕಳುಹಿಸ ಬೇಕಾದ ಮೊಕದ್ದಮೆಗಳಲ್ಲಿ, ಸೆಷ್ಷ ಜಡ್ಜ್‌ರು ಮಾಡಿದ ಆರ್ಡರಿನ ನಕಲನ್ನೂ, ವಿಶೇಷ ಅಧಿಕಾರವನ್ನು ಚಲಾಯಿಸತಕ್ಕ ಡೆಪ್ಯುಟೇ ಕಮ್ಮಿಷನರುಗಳ ತೀರ್ಪಿನ ನಕಲನ್ನೂ, ಇದಕ್ಕೆ ಜಂಟಿಸಿರುವ ನಮೂನೆ ತಖ್ತೆಯ ಪ್ರಕಾರ, ಮೇಲಕ್ಕೆ ಕಳುಹಿಸತಕ್ಕದ್ದು; ಮತ್ತು ಇವುಗಳನ್ನು ಸೆಷ್ಷ ಜಡ್ಜ್‌ರ ಆರ್ಡರಿನ ತಾರೀಖು ಲುಗಾಯತು 48 ಘಂಟೆ ಯೊಳಗಾಗಿ ಕಳುಹಿಸತಕ್ಕದ್ದು.

3. ಕ್ರಿಮಿನಲ್ ಪ್ರೊಸಿಜ್ಯುರ್ ಕೋಡ್ 30, 34ನೇ ಪ್ರಕರಣಗಳ ಮೇರೆ ವಿಶೇಷ ಅಧಿಕಾರವನ್ನು ಹೊಂದಿರತಕ್ಕ ಡೆಪ್ಯೂಟಿ ಕಮ್ಮಿಷನರುಗಳು, 3 ವರುಷಗಳಿಗಿಂತಲೂ ಹೆಚ್ಚಾಗದ ಸಜಾಕ್ಕೆ ಸಂಬಂಧಿಸಿದ ಮೊಕದ್ದಮೆಗಳಲ್ಲಿ, ವಿಚಾರಣೆ ಮುಗಿದ 24 ಘಂಟೆ ಯೊಳಗಾಗಿ, ಮೇಲೆಕಂಡ ನಮೂನೆಯ ಕ್ಯಾಲಂಡರುಗಳನ್ನು ಸೆಷನ್ ಜಡ್ಜರಿಗೆ ರವಾನಿಸತಕ್ಕದ್ದು.

4. ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರು ವಿಚಾರಣೆ ಮಾಡಿದ ಎಲ್ಲಾ ಮೊಕದ್ದಮೆಗಳಲ್ಲಿಯೂ, ಕ್ರಿಮಿನಲ್ ಪ್ರೊಸಿಜ್ಯುರ್ ಕೋಡ್ 8, 10, 11, 12, 36ನೇ ಅಧ್ಯಾಯಗಳ ರೀತ್ಯಾ ಅವರು ನಡಿಸಿದ ನಡವಳಿಕೆಗಳಲ್ಲಿಯೂ ಸಹಾ, ವಿಚಾರಣೆ ಮುಗಿದ 24 ಘಂಟೆ ಯೊಳ ಗಾಗಿ, ಅದೇ ನಮೂನೇ ತಖ್ತೆಗಳನ್ನು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರುಗಳು ಸೆಷನ್ ಜಡ್ಜಿಗಳಿಗೆ ಕಳುಹಿಸತಕ್ಕದ್ದು.

5. ಸಬ್ ಡಿ|| ಮಾಜಿಸ್ಟ್ರೇಟರು 1ನೇ ಕ್ಲಾಸ್ ಮಾಜಿಸ್ಟ್ರೇಟರು ವಿಚಾರಣೆ ಮಾಡಿದ ಎಲ್ಲಾ ಮೊಕದ್ದಮೆಗಳಲ್ಲಿಯೂ, ಕ್ರಿ|| ಪ್ರೊ ಸಿಜ್ಯೂರ್ ಕೋಡು 8, 10, 11, 12, 36ನೇ ಅಧ್ಯಾಯಗಳ ರೀತ್ಯಾ ಅವರು ನಡಿಸಿದ ನಡವಳಿಕೆಗಳಲ್ಲಿಯೂ ಸಹ, ವಿಚಾರಣೆ ಮುಗಿ ದ 24 ಘಂಟೆ ಯೊಳಗಾಗಿ ಅದೇ ನಮೂನೇ ತಖ್ತೆಗಳನ್ನು ಸಬ್ ಡಿ|| ಮಾಜಿಸ್ಟ್ರೇಟರು, 1ನೇ ಕ್ಲಾಸ್ ಮಾಜಿಸ್ಟ್ರೇಟರು ಸಹಾ, ಡಿಸ್ಟ್ರಿಕ್ಟ್ ಮಾಜಸ್ಟ್ರೇಟರಿಗೆ ಕಳುಹಿಸತಕ್ಕದ್ದು.

6. ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರು ಚೀಫ್ ಕೋರ್ಟಿಗೆ ಡಿವೀರ್ಷಗಾಗಿ ಕಳುಹಿಸ ಬಹುದಾದ ತಖ್ತೆಗಳು ವಿನಾ, ಇದಕ್ಕೆ ಹಿಂದಿನ ಕಲಂ ಪ್ರಕಾರ ತಮ್ಮಲ್ಲಿಗೆ ಬರತಕ್ಕ ತಖ್ತೆಗಳನ್ನು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರವರು ಸೆಷನ್ ಜಡ್ಜರಿಗೆ ಕಳುಹಿಸತಕ್ಕದ್ದು.

7. ಸೆಷನ್ ಜಡ್ಜರು, 3, 4, 6ನೇ ನಿಬಂಧನೆಗಳ ಮೇರೆ ಜಾಹಿರಾದ ತಖ್ತೆಗಳನ್ನು ತಾವು ಪರಿಶೋಧಿಸಿದ ತರುವಾಯ, ಚೀಫ್ ಕೋರ್ಟಿಗೆ ಕಳುಹಿಸತಕ್ಕದ್ದೂ ಅಲ್ಲದೆ, ಮಾಜಿಸ್ಟ್ರೇಟರ ನಡವಳಿಕೆಯಲ್ಲಿ ಏನಾದರೂ ಲೋಪಗಳೂ ಅಕ್ರಮಗಳೂ ಇದ್ದರೆ ಅವು ಗಳನ್ನೂ ಅದೇ ಕಾಲದಲ್ಲಿ ಚೀಫ್ ಕೋರ್ಟಿನವರ ಗಮನಕ್ಕೆ ತರತಕ್ಕದ್ದು.

8. ಸಮಸ್ತ 2ನೇ 3ನೇ ಕ್ಲಾಸ್ ಮಾಜಿಸ್ಟ್ರೇಟರು ವಿಚಾರಣೇ ಮಾಡಿದ ಮೊಕದ್ದಮೆಗಳ ಕ್ಯಾಲಂಡರ್ ತಖ್ತೆಯನ್ನು ಅದೇ ನಮೂನೆಯಲ್ಲಿ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಗೆ ಕಳುಹಿಸತಕ್ಕದ್ದು; ಅಥವಾ, ಸಬ್‌ಡಿವಿರ್ಷ ಮಾಜಿಸ್ಟ್ರೇಟರಿರತಕ್ಕ ಸ್ಥಳಗಳಲ್ಲಿ, ಅಂಥಾ ಸಬ್ ಡಿವೀರ್ಷ ಮಾಜಿಸ್ಟ್ರೇಟರ ಮೂಲಕ ಕಳುಹಿಸತಕ್ಕದ್ದು. ಅಂಥಾ ಸಬ್ ಡಿವೀರ್ಷ ಮಾಜಿಸ್ಟ್ರೇಟರು ಅದನ್ನು ಪರಿಶೋಧಿಸಿ ನೋಡಿದ ತರುವಾಯ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಗೆ ರವಾನಿಸತಕ್ಕದ್ದೂ ಅಲ್ಲದೆ, ಕೀಳ್‌ಪಟ್ಟ ಮಾಜಿಸ್ಟ್ರೇಟರು ಮಾಡಿರತಕ್ಕ ನಡವಳಿ ಕೆಯಲ್ಲಿ ಏನಾದರು ಲೋಪಗಳಾಗಲಿ ಅಕ್ರಮಗಳಾಗಲಿ ಇದ್ದರೆ ಅವುಗಳನ್ನೂ ಅದೇಕಾಲದಲ್ಲಿ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರವರ ಗಮನಕ್ಕೆ ತರತಕ್ಕದ್ದು.

9. ಕ್ರಿಮಿನಲ್ ಪ್ರೊಸಿಜ್ಯುರ್ ಕೋಡ್ 209ನೇ ಪ್ರಕರಣ ರೀತ್ಯಾ ಅವರಾಧಿಯು ವಜಾ ಆಗಿದ್ದರ, 2ನೇ ಅಥವಾ 3ನೇ ಕ್ಲಾ ಸ್ ಮಾಜಿಸ್ಟ್ರೇಟರು ಆರ್ಡರಿನ ನಕಲನ್ನು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಗೆ ಅಥವಾ ಸಬ್ ಡಿವಿರ್ಷ ಮಾಜಿಸ್ಟ್ರೇಟರಿಗೆ ರವಾನಿಸತಕ್ಕದ್ದು. ತರುವಾಯ ಅಂಥಾ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್ ಅಥವಾ ಸಬ್ ಡಿವೀರ್ಷ ಮಾಜಿಸ್ಟ್ರೇಟರವರು ತಮಗೆ ಅವಶ್ಯಕವೆಂದು ತೋರಿಬರುವ ಪರಾಮೊಡನೆ ಸೆಷನ್‌ಜಡ್ಜರಿಗೆ ಕಳುಹಿಸತಕ್ಕದ್ದು.

10. ಈ ಸಂಗತಿಗಳೆಲ್ಲೆಲ್ಲಾ, ತಖ್ತೇಸಂಗಡ ಜಡ್ಜ್‌ಮೆಂಟಿನ ಅಥವಾ ಆರ್ಡರಿನ ನಕಲು ಸೇರಿರತಕ್ಕದ್ದು.

11. ಕೀಳ್‌ಪಟ್ಟ ಮಾಜಿಸ್ಟ್ರೇಟರವರ ಜಡ್ಜ್‌ಮೆಂಟಿನ ನಕಲು ಬಂದ ತರುವಾಯ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರು ಅದನ್ನು ಚನ್ನಾ ಗಿ ಪರಿಶೋಧಿಸತಕ್ಕದ್ದು. ರಿವೀರ್ಷ ಅಂದರೆ ಪುನರಾ ವ ಲೋಕನಕ್ಕೆ ಬರತಕ್ಕದೆಂದು ತಮಗೆ ತೋರುವ ಮೊಕದ್ದಮೆಗಳನ್ನು ಕೂ ಡಲೆ ಚೀಫ್ ಕೋರ್ಟಿಗೆ ರಿಪೋರ್ಟು ಮಾಡತಕ್ಕದ್ದು.

12. ತಮ್ಮ ಜಾಹಿರಾತಿಗೆ ಬಂದ ತಖ್ತೆಗಳು ಅಥವಾ ಜಡ್ಜ್‌ಮೆಂಟುಗಳ ಮೇಲೆ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರವರು ಅಥವಾ ಸಬ್ ಡಿವೀರ್ಷ ಮಾಜಿಸ್ಟ್ರೇಟರವರು ಏನಾದರೂ ಪ್ರೊಸೀಡಿಂಗ್ಸ್ ಮಾಡಿದ್ದರೆ ಅದರ ನಕಲನ್ನೂ, ಹಾಗೆ ಪುನರಾವಲೋಕನವಾದ ತಖ್ತೆ ಗಳ ಅಥವಾ ಜಡ್ಜ್‌ಮೆಂಟುಗಳ ನಕಲನ್ನೂ ಸಹ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರವರು ಚೀಫ್ ಕೋರ್ಟಿಗೆ ಕಳುಹಿಸತಕ್ಕದ್ದು. ತಮ್ಮಲ್ಲಿಗೆ ಬಂದ ತಖ್ತೆಗಳಮೇಲೂ ಜಡ್ಜ್‌ಮೆಂಟುಗಳ ಮೇಲೂ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರು ಅಥವಾ ಸಬ್ ಡಿವೀರ್ಷ ಮಾಜಿಸ್ಟ್ರೇಟರು ಯಾವ ಪ್ರೊಸೀಡಿಂಗ್ಸ್‌ನ್ನೂ ಮಾಡದಿದ್ದರೆ, ಆ ತಖ್ತೆಗಳನ್ನೇ ಅಥವಾ ಜಡ್ಜ್‌ಮೆಂಟುಗಳನ್ನೇ ಚೀಫ್ ಕೋರ್ಟಿಗೆ ಜಾಹಿರ್ ಮಾಡತಕ್ಕ ಅಗತ್ಯವಿಲ್ಲ.

ಅಪ್ಪೀಲ್ ಅಧಿಕಾರ ಮತ್ತು ಚಿಲ್ಲರೇ ನಡೆವಳಿಕೆಗಳು.

13. ಸೆಷನ್ ಜಡ್ಜರು ತಮ್ಮ ಅಪ್ಪೀಲ್ ಅಧಿಕಾರದಲ್ಲಿ ಕೊಡತಕ್ಕ ಜಡ್ಜ್‌ಮೆಂಟಿನ ಅಥವಾ ಆರ್ಡರಿನ ನಕಲನ್ನೂ, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನಲ್ಲಿ ವಿಧಾಯಿಸಿರುವ ರೀತ್ಯಾ ತೀರ್ಮಾನವಾಗದೇ ನಿಂತಿರುವ ವಿಷಯವನ್ನು ಅವರು ಪೂರ್ಣವ್ಯವಸ್ಥೆಮಾಡಿ ಕೊಡ ತಕ್ಕ ಚಿಲ್ಲರೇ ಆರ್ಡರುಗಳ ನಕಲನ್ನೂ ಸಹಾ, ಅಂಥಾ ಫೈಸಲ್ ಅಥವಾ ಆರ್ಡರು ಆದ 48 ಘಂಟೆಯೊಳಗಾಗಿ ಚೀಫ್ ಕೋರ್ಟಿಗೆ ಜಾಹಿರ್‌ಮಾಡತಕ್ಕದ್ದು.

14. ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರವರು ತಮ್ಮ ಅಪ್ಪೀಲ್ ಅಧಿಕಾರದಲ್ಲಿ ಕೊಡತಕ್ಕ ಜಡ್ಜ್‌ಮೆಂಟಿನ ಅಥವಾ ಆರ್ಡರಿನ ನಕಲನ್ನೂ ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನಲ್ಲಿ ವಿಧಾಯಿಸಿರುವ ರೀತ್ಯಾ ತೀರ್ಮಾನವಾಗದೇ ನಿಂತಿರುವ ವಿಷಯವನ್ನು ಪೂರ್ಣವ್ಯವಸ್ಥೆಮಾಡಿ ಕೊಡತಕ್ಕ ಚಿಲ್ಲರೆ ಆರ್ಡರಿನ ನಕಲನ್ನೂ ಸಹಾ, ಅಂಥಾ ಫೈಸಲ್ ಅಥವಾ ಆರ್ಡರಾದ 48 ಘಂಟೆ ಯೊಳಗಾಗಿ ಸೆಷ್ಷ ಕೋರ್ಟಿಗೆ ಜಾಹಿರ್ಮಾಡತಕ್ಕದ್ದು.

15. ಸಬ್ ಡಿವೀಷ್ಯ ಮಾಜಿಸ್ಟ್ರೇಟರು ಅಥವಾ 1ನೇ ಕ್ಲಾಸ್ ಮಾಜಿಸ್ಟ್ರೇಟರು ಮೇಲೆ ಕಂಡಂತೆ ಮಾಡಿದ ಅಪ್ಪೀಲ್ ಜಡ್ಜ್‌ಮೆಂಟಿನ ಮತ್ತು ಚಿಲ್ಲರೇ ಆರ್ಡರಿನ ನಕಲುಗಳನ್ನು 48 ಘಂಟೆಯೊಳಗಾಗಿ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಗೆ ಕಳುಹಿಸತಕ್ಕದ್ದು.

16. ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರು ಅವುಗಳನ್ನು ಪರಿಶೋಧಿಸಿದ ತರುವಾಯ ಸೆಷ್ಷ ಜಡ್ಜ್‌ರವರಿಗೆ ಕಳುಹಿಸತಕ್ಕದ್ದು.

17. ಸೆಷ್ಷ ಜಡ್ಜ್‌ರವರು 14 ಮತ್ತು 16ನೇ ನಿಬಂಧನೆಗಳ ಮೇರೆ ತಮಗೆ ಜಾಹಿರ್ಮಾಡಲ್ಪಟ್ಟ ತಪ್ಪೆಗಳನ್ನು ಪರಿಶೋಧಿಸಿದ ತರುವಾಯ ಚೀಫ್ ಕೋರ್ಟಿಗೆ ಕಳುಹಿಸತಕ್ಕದ್ದೂ ಅಲ್ಲದೆ, ಮಾಜಿಸ್ಟ್ರೇಟರ ನಡವಳಿಕೆಯಲ್ಲಿ ಲೋಪಗಳು ಅಥವಾ ಅಕ್ರಮಗಳು ಇದ್ದರೆ ಅವುಗಳನ್ನೂ ಅದೇಕಾಲದಲ್ಲಿ ಚೀಫ್ ಕೋರ್ಟಿನವರ ಗಮನಕ್ಕೆ ತರತಕ್ಕದ್ದು.

18. ಚೀಫ್ ಕೋರ್ಟಿಗೂ, ಸೆಷ್ಷಜಡ್ಜ್‌ರಿಗೂ, ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಗೂ ಸಹಾ 13, 14, 15, 16, ಮತ್ತು 17ನೇ ಕಲಂಗಳಪ್ರಕಾರ ಕಳುಹಿಸತಕ್ಕದೆಂದು ವಿಧಿಸಿರುವ ಅಪ್ಪೀಲ್ ಜಡ್ಜ್‌ಮೆಂಟಿನ ಕಾಪಿಯ ಸಂಗಡ, ಯಾತರ ಮೇಲೆ ಅಪ್ಪೀಲಾಗಿದೆಯೋ ಅಂಥಾ ಜಡ್ಜ್‌ಮೆಂಟಿನ ಅಥವಾ ಆರ್ಡರಿನ ನಕಲೂ, ಅಂಥಾ ಜಡ್ಜ್‌ಮೆಂಟಿಗೆ ಅಥವಾ ಆರ್ಡರಿಗೆ ಲಗತ್ತು ಮಾಡಿರುವ ಕ್ಯಾಲಂಡರು ಅಥವಾ ತಪಶೀಲ್‌ಪಟ್ಟಿಯೂ ಸಹ ಸೇರಿಸತಕ್ಕದ್ದು.

19. ಮೇಲೆ ಕಂಡಂತೆ ಸೆಷ್ಷ ಜಡ್ಜ್‌ರಿಗೂ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಗೂ ಜಾಹಿರಾದ ಅಪ್ಪೀಲ್ ಜಡ್ಜ್‌ಮೆಂಟುಗಳ ಮತ್ತು ಆರ್ಡರುಗಳ ಮೇಲೆ ಅವರು ಮಾಡಿದ ಪ್ರೊಸಿಡಿಂಗ್ಸ್ ಎಂಬ ನಡವಳಿಕೆ ಏನಾದರು ಇದ್ದರೆ, ಅದರ ಪ್ರತಿಯನ್ನು ಚೀಫ್ ಕೋರ್ಟಿಗೆ ಕಳುಹಿಸತಕ್ಕದ್ದು.

20. ತಮಗೆ ಇರತಕ್ಕ ಮೇಲ್ ವಿಚಾರಣೆಯ ಅಧಿಕಾರವನ್ನು ಚಲಾಯಿಸುವುದರಲ್ಲಿ, ಸೆಷ್ಷ ಜಡ್ಜ್‌ರೂ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರೂ ಮನಸಿಟ್ಟು ನೋಡತಕ್ಕ ಮುಖ್ಯವಾದ ಅಂಶಗಳು ಯಾವವೆಂದರೆ:—

(a) ದುಡುಕಿನಿಂದ ಅಥವಾ ಅನಾವಶ್ಯಕವಾಗಿ ಪ್ರೊಸೆಸ್ ಕೊಡುವುದು.

(b) ಅತಿಕ್ರಮಪ್ರವೇಶದ ಅಥವಾ ಕೆಡಕಿನ ಛಾರ್ಜ್‌ಂಬ ನೆಪದ ಮೇಲೆ, ವಿವಾದಾಸ್ಪದವಾದ ಹಕ್ಕಿನ ವಿಷಯವನ್ನು ಕುರಿತು ನಡವಳಿಕೆ ನಡಿಸುವುದು, ಮತ್ತು ದ್ರೋಹಚಿಂತೆ ಇದೆ ಯಂಬ ವಿಷಯವನ್ನು ತೀರ್ಮಾನಿಸದೆ ಮೊದಲು ಹೇಳಿದ ಅತಿಕ್ರಮ ಪ್ರವೇಶಕ್ಕಾಗಿ ಶಿಕ್ಷೆಯನ್ನು ವಿಧಿಸುವುದು.

(c) ಅಪರಾಧಿಗಳ ಉಪಪತ್ತಿ ವಿಾರಿ ಪರೋಕ್ಷವಾದ ಜರಿಮಾನೇ ದಂಡವನ್ನು ವಿಧಿಸುವುದು.

(d) ಒಂದು ಅಪರಾಧವು ಕಠಿಣವಾದ ಶಿಕ್ಷೆಯನ್ನು ವಿಧಿಸತಕ್ಕದ್ದಾಗಿ ಇರುವಲ್ಲಿ, ಅಂಥಾ ಅಪರಾಧಕ್ಕೆ ಸಂಬಂಧಿಸುವ ಮೊಕದ್ದಮೆಗಳು ಮೇಲ್ಪಟ್ಟ ಕೋರ್ಟಿಗೆ ಹೆಚ್ಚು ಶಿಕ್ಷೆಗೋಸ್ಕರ ಕಳುಹಿಸಲ್ಪಡಬೇಕಾಗಿದ್ದಾಗ್ಯೂ, ಕೀಳ್ಪಟ್ಟ ಕೋರ್ಟಿನವರು ಸುಲಭವಾದ ಶಿಕ್ಷೆಯನ್ನು ವಿಧಿಸುವುದು.

(e) ಜರಿಮಾನೇ ಹಣವನ್ನು ಕೊಡದೆ ತಪ್ಪಿದಲ್ಲಿ, ಮಾಜಿಸ್ಟ್ರೇಟರಿಗಿರುವ ಅಧಿಕಾರಕ್ಕೆ ವಿಾರಿದ ವಾಯಿದೆಗೆ, ಸಜಾವನ್ನು ಹೆಚ್ಚಿಸಬಹುದೆಂಬ ದೃಷ್ಟಿಯಿಂದ, ಸಜಾದ ಜೊತೆಗೆ ಭಾರಿ ಜರಿಮಾನೆಯನ್ನೂ ವಿಧಿಸುವುದು.

(f) ಕಲಹ ಮೊದಲಾದ್ದನ್ನು ಮಾಡದೆ ಸವಾಧಾನವುನ್ನು ಕಾಪಾಡುವುದಕ್ಕಾಗಲಿ, ಒಳ್ಳೇ ನಡತೆಗಾಗಲಿ ಅತಿಯಾದ ಜಾಮೀನ್ ಅಥವಾ ಆಧಾರವನ್ನು ಅಪೇಕ್ಷಿಸುವುದು.

(g) ಮೊಕದ್ದಮೆಗಳನ್ನು ತೀರ್ಮಾನ ಮಾಡುವುದರಲ್ಲಿ ಅಪ್ರಕೃತವಾದ ಸಾವಕಾಶ.

21. ನಂದೀದುರ್ಗದ ಡಿವಿಷನಲ್ಲಿ, ಸೆಷ್ಷಜಡ್ಜ್‌ರ ಬರಿಜಿನಲ್ ಮತ್ತು ಅಪ್ಪೀಲ್ ಅಧಿಕಾರದ ಚಲಾವಣೇ ವಿಷಯವಾಗಿ ಅವರಿಗೆ ಜಾಹಿರ್ಮಾಡತಕ್ಕ ಜಡ್ಜ್‌ಮೆಂಟುಗಳ ಆರ್ಡರುಗಳ, ಮತ್ತು ಕ್ಯಾಲಂಡರುಗಳ ನಕಲುಗಳನ್ನು ಚೀಫ್ ಕೋರ್ಟಿಗೆ ಜಾಹಿರ್ಮಾಡತಕ್ಕದ್ದು.

569

ಜಂಜಿ ನಂ ಎರಡು.	ಫಿರ್ಯಾದಿ ಹೆಸರು.	ಅಪರಾಧಿಯ ತಪಸೀಲು.						ಫಿರ್ಯಾದಿಗಳತಕ್ಕ ಆರೋಪ.	ಪೋಲೀಸ್ ಅಧಿಕಾರಿ ಫಿರ್ಯಾದಿ ಆದಲ್ಲಿ ಮಾಜರಾದ ತಾರೀಖು.	ಆರೋಪಿಯು ದಸ್ತಗಿರಿ ಆದ ಅಥವಾ ಮಾಜರಾದ ತಾರೀಖು.	ಸಿಂಪರಣೆ ನಿರ್ಣಯವಾದ ತಾರೀಖು.	ಫೈಸಲಾದ ತಾರೀಖು.	ಸಿಂಪರಣೆಯಾದ ದಿನಗಳು.	ಸಜ್ಜನಾಂ ಅಪೀಲ್ ಆದರೆ ಆ.	ಸಜ್ಜನಾಂಕ್ಕೆ ಕಾರಣ.	ಷರಾ.
		ಹೆಸರು.	ತಂದೆ ಹೆಸರು.	ಜಾತಿ.	ವೃತ್ತಿ.	ವಯಸ್ಸು.	ನಿವಾಸಸ್ಥಳ.									
1	2	3	4	5	6	7	8	9	10	11	12	13	14	15	16	17

ಮಿಹಾರಾ—ಪೂರ್ವದಲ್ಲಿ ಸಜಾ ಆಗಿದ್ದರೆ ಅದರ ತಪಸೀಲನ್ನೂ ಷರಾ ಹೆಡ್ಡಿನಲ್ಲಿ ದಾಖಲ್ಮಾಡತಕ್ಕದ್ದು.

ಅಪ್ಪಣೇ ಪ್ರಕಾರ,
ಎಸ್. ಆರ್. ಸುಬ್ಬರಾಯ ಐಯ್ಯರ್,
ರಜಿಸ್ಟ್ರಾರ್.